# ಕರ್ನಾಟಕ ಸರ್ಕಾರ
## ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/41/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:26.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ತೆರೆದ ತಂಗುದಾಣಗಳಲ್ಲಿರುವ ಮಕ್ಕಳನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸುಮೋಟೋ ರಿಟ್ ಅರ್ಜಿ (ಸಿವಿಲ್) ಸಂ.1/2020 ದಿನಾಂಕ:23.03.2020
2) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸುಮೋಟೋ ರಿಟ್ ಅರ್ಜಿ (ಸಿವಿಲ್) ಸಂ.4/2020 ದಿನಾಂಕ:03.04.2020
3) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸುಮೋಟೋ ರಿಟ್ ಅರ್ಜಿ (ಸಿವಿಲ್) ಸಂ.1/2020 ದಿನಾಂಕ:07.04.2020 & 13.04.2020 ರ ಐ.ಎ.ಗಳಲ್ಲಿ ನೀಡಿದ ಆದೇಶಗಳು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ನವದೆಹಲಿ ರವರಿಗೆ ಈಗಾಗಲೇ ಸಲ್ಲಿಸಿರುವ ಕೋವಿಡ್-19 ಸಂಬಂಧಪಟ್ಟ 3ನೇ ವಾರದ ವರದಿ(ದಿನಾಂಕ:15.04.2020ರಂತೆ)ಯ ಪ್ರಕಾರ ರಾಜ್ಯಾದ್ಯಂತ ತೆರೆದ ತಂಗುದಾಣಗಳಲ್ಲಿ 252 ಮಕ್ಕಳಿರುವುದಾಗಿ ತಿಳಿಸಲಾಗಿದೆ.

ಉಲ್ಲೇಖಿತ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳ ಹಿನ್ನೆಲೆಯಲ್ಲಿ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಾವಳಿ 2016ರ ನಿಯಮ 22(7)ರಂತೆ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಈ ವಿಷಯವನ್ನು ಮಕ್ಕಳ ಕಲ್ಯಾಣ ಸಮಿತಿಗಳ ಮುಂದೆ ಮಂಡಿಸಿ, ತೆರೆದ ತಂಗುದಾಣಗಳಲ್ಲಿರುವ ಮಕ್ಕಳನ್ನು ಪೋಷಕರ ವಶಕ್ಕೆ ನೀಡಲು ಅಗತ್ಯ ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

ಅಲ್ಲದೇ ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳು ಆಗಿಂದಾಗ್ಗೆ ತೆರೆದ ತಂಗುದಾಣಗಳಿಗೆ ದಾಖಲಾಗುವ ಅವಕಾಶಗಳಿರುವ ಹಿನ್ನೆಲೆಯಲ್ಲಿ ಆಗಿಂದಾಗ್ಗೆ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಗಳಿಂದ ಸೂಕ್ತ ಆದೇಶಗಳನ್ನು ಪಡೆದು ಪೋಷಕರ ವಶಕ್ಕೆ ನೀಡಲು ಕ್ರಮ ಕೈಗೊಳ್ಳಲು ಸೂಚಿಸಿದೆ.

ಮಕ್ಕಳನ್ನು ತೆರೆದ ತಂಗುದಾಣಗಳಿಂದ ಪೋಷಕರ ವಶಕ್ಕೆ ನೀಡಲು ಬಾಲನ್ಯಾಯ(ಪಾಲನೆ ಮತ್ತು ರಕ್ಷಣೆ) ಅಧಿನಿಯಮ 2015 ರನ್ವಯ ಕ್ರಮ ಕೈಗೊಳ್ಳುವಾಗ ತೆರೆದ ತಂಗುದಾಣದವರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದವರು, ಮಕ್ಕಳ ಕಲ್ಯಾಣ ಸಮಿತಿರವರು ಉಲ್ಲೇಖ (1), (2) ಮತ್ತು (3)ರಂತೆ

ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನಗಳನ್ನು ಹಾಗೂ ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯವು ದಿನಾಂಕ:15.04.2020 ರಂದು ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳಿಗೆ

ನೀಡಿದ ವಿವರವಾದ ಮಾರ್ಗದರ್ಶನಗಳನ್ನು ಅನುಸರಿಸಿ ಕೋವಿಡ್-19ಗೆ ಸಂಬಂಧಪಟ್ಟ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಅಚ್ಚುಕಟ್ಟಾಗಿ ಅನುಪಾಲಿಸಲು ಸೂಚಿಸಿದೆ. ಮಕ್ಕಳನ್ನು ಪೋಷಕರ ವಶಕ್ಕೆ ತಲುಪಿಸಿ ಅವರ ಮನೆಗಳಿಗೆ ಕಳುಹಿಸುವಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸದರಿ ಸಾರಿಗೆ ವ್ಯವಸ್ಥೆ ಬಗ್ಗೆ ನೀಡಿರುವ ಸೂಚನೆಗಳನ್ನು ಪ್ರತ್ಯೇಕವಾಗಿ ಗಮನದಲ್ಲಿಟ್ಟುಕೊಂಡು ಅನುಸರಿಸತಕ್ಕದ್ದು. ಪ್ರಧಾನ ಕಛೇರಿಯ ಪತ್ರ ಸಂ.ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/40/2020-21 ದಿನಾಂಕ:20.04.2020ರ ಪತ್ರದಲ್ಲಿರುವ ಅಂಶಗಳನ್ನೂ ಸಹ ಗಮನಿಸಲು ಸೂಚಿಸಿದೆ.

ಈ ವಿಷಯದ ಬಗ್ಗೆ ತೆಗೆದುಕೊಂಡ ಕ್ರಮದ ವಿವರವನ್ನು ಪ್ರತೀ ವಾರ ಪ್ರಧಾನ ಕಛೇರಿಗೆ ಲಗತ್ತಿಸಿದ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

ತಮ್ಮ ವಿಶ್ವಾಸಿ,

26.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

ಪ್ರತಿಯನ್ನು:-
ಅಧ್ಯಕ್ಷರುಗಳು, ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳು.